(8ನೇ ಪುಟದಿಂದ)

ಆದರೆ ವಾಸ್ತವದಲ್ಲಿ ಈ ಕೋಟೆಯನ್ನು ಭೇದಿಸಿ ಹೊರ ಹೋಗುವುದೆಂತು?! ಹಾಂ... ಇಲ್ಲಿದೆ– ಸ್ವಲ್ಪ ಜಾಳು ಜಾಳಾದ ರಚನೆ! ಸ್ವಾತಂತ್ರ್ಯದಾಸೆಯ ತೀವ್ರ ಖುಷಿಯಿಂದ ಗೂಡಿನ ಆ ಜಾಗಕ್ಕೆ ಮುತ್ತಿಡುತ್ತಲೇ ತಲೆಯನ್ನು ಸ್ವಲ್ಪ ಸ್ವಲ್ಪವಾಗಿ ಆ ಕಡೆ ಈ ಕಡೆ ತೂರಿಸುತ್ತಾ ಆ ಬಂಧೀಖಾನೆಯಿಂದ ಹೊರಗೆ ಹಣಿಕ್ಕಿದರೆ, ಒಮ್ಮೆಲೆ ರಾಚಿದ ಪ್ರಖರ ಬೆಳಕಿಗೆ ಒಂದು ಕ್ಷಣ ಕಣ್ಣಿಗೆ ಕತ್ತಲೆ ಕವಿದಂತಾಯಿತು!

ಹಾಗೂ ಹೀಗೂ ಸಾವರಿಸಿಕೊಂಡು ಯಾವುದೋ ಮರದ ಕೊರಡಿನ ಮೇಲೆ ಉಶ್ಶಪ್ಪಾ ಎಂದು ಕುಳಿತರೆ ಈ ಫೋಟೋಗ್ರಫಿ ಹುಚ್ಚಿನ ಮೊಹಮ್ಮದ್ ಬಾಬು, ‘ಅರೇ ಮುಕುಂದಜೀ, ರೇಷ್ಮೆ ಚಿಟ್ಟೆ ಗೂಡಿಂದ ಹೊರಬಂತು, ಬನ್ನಿ ಫೋಟೋ ತೆಗೆಯೋಣ’ ಎಂದು ಸಂಭ್ರಮದಿಂದ ಕ್ಯಾಮೆರಾ ರೆಡಿ ಮಾಡಿಕೊಂಡರು. ನಾನೇನು ಕಡಿಮೆ! ‘ಇರಿ ಸ್ವಾಮಿ, ಸ್ವಲ್ಪ ಸ್ಟೈಲಾಗಿ ಪೋಸ್ ಕೊಡುತ್ತೇನೆ’ ಎಂದು ಘನ ಗಾಂಭೀರ್ಯದಿಂದ ಕುಳಿತು ಹಿಡಿಸಿದೆ ಫೋಟೋ. ನಿಮಗೆ ಹಿಡಿಸಿತಾ?







(ಮೊಟ್ಟೆಯಿಂದ ಹೊರಬಂದ ಪುಟ್ಟ ರೇಷ್ಮೆ ಹುಳು ಸತತವಾಗಿ ಹಿಪ್ಪನೇರಳೆ ಸೊಪ್ಪು ತಿನ್ನುತ್ತ, ಹಂತ ಹಂತವಾಗಿ ಬೆಳೆಯುತ್ತ, ಕೊನೆಯ ಹಂತದಲ್ಲಿ ತನ್ನ ಕೋಶಾವಸ್ಥೆಯ ರಕ್ಷಣೆಗಾಗಿ ತನ್ನ ಸುತ್ತಲೂ ರೇಷ್ಮೆ ಎಳೆಯ ಗೂಡನ್ನು ಕಟ್ಟಿಕೊಂಡು ಕೋಶಾವಸ್ಥೆಯಲ್ಲಿಯೇ (ಪ್ಯೂಪ) ೮-೧೦ ದಿನಗಳ ಕಾಲವಿದ್ದು ನಂತರ ತೀವ್ರ ಚಟುವಟಿಕೆಯ ಚಿಟ್ಟೆಯಾಗಿ ರೂಪಾಂತರಗೊಂಡು ಗೂಡಿನ ಎಳೆಗಳನ್ನು ತನ್ನ ಲಾಲಾರಸದಿಂದ ಒದ್ದೆ ಮಾಡಿ ಅವುಗಳ ಮಧ್ಯೆ ತೂರಿ ಹೊರಬಂದು ಸಂಗಾತಿಯೊಡನೆ ಸಮಾಗಮ ಹೊಂದಿ ಮತ್ತೆ ಮೊಟ್ಟೆ ಇಟ್ಟು, ಮರಿಯಾಗಿ... – ಹೀಗೆಯೇ ಈ ಹುಳುವಿನ ಜೀವನ ಚಕ್ರ! ಕತ್ತಲೆಯ ರೇಷ್ಮೆ ಗೂಡಿನಿಂದ ಹೊರಬಂದ ರೇಷ್ಮೆ ಚಿಟ್ಟೆಯ ಫೋಟೋ ಕಥೆಯಿದು!)